**Crl. Misc 421/2023 PW-1**

ದಿನಾಂಕಃ. **25.04.2026** ರಂದು ಸಾಕ್ಷಿಗೆ ಮದ್ಯಾಹ್ನ **3** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀಮತಿ ಕೆ.ಎನ್,ಇ. . ವಕೀಲರಿಂದಃ**

ನಾನು ಬಿ.ಕಾಂ ಓದಿದ್ದೇನೆ. ನನಗೆ ಇಬ್ಬರು ಮಕ್ಕಳು. ನನ್ನ 1 ನೇ ಮಗ ಇಂಜಿನಿಯರಿಂಗ್ 6 ನೇ ಸೆಮಿಸ್ಟರ್ ಓದುತ್ತಿದ್ದಾನೆ ಅವನಿಗೆ ಈಗ 20 ವಯಸ್ಸು. ನನ್ನ ಮಗಳು ಈಗ 9 ನೇ ತರಗತಿ ಓದುತ್ತಿದ್ದಾಳೆ.

ನಾನು ಕನಕಪುರದ ಲಕ್ಷ್ಮೀ ವಿಳಾಸ ಮಹಿಳಾ ಕೋ ಆಪರೇಟಿವ್ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ನಾನು 2007 ರಿಂದ 2022 ರವರೆಗೆ ಆ ರೀತಿ ಕೆಲಸ ಮಾಡಿದ್ದೇನೆ. ನಾನು ಮದುವೆಯಾದಾಗ ನನ್ನ ಅತ್ತೆ ಮಾವ ನನ್ನ ಜೊತೆಗೆ ಇದ್ದರು ಎಂದರೆ ಸರಿ. ನಾನು ಕೆಲಸಕ್ಕೆ ಹೋಗುವಾಗ ನನ್ನ ಅತ್ತೆ ಮನೆ ಕೆಲಸ ಮಾಡಿಕೊಂಡು ನನ್ನೊಂದಿಗೆ ಇರುತ್ತಿದ್ದರು ಎಂದರೆ ಸರಿ. ನನ್ನ ಮಾವ ಮನೆಯಲ್ಲಿ ಇರುತ್ತಾರೆ ಯಾರಾದರು ಬಂದರೆ ಜ್ಯೋತಿಷ್ಯ ಹೇಳಲು ಮನೆಯ ಮೇಲೆ ಹೋಗುತ್ತಾರೆ.

ನಾನು ಮದುವೆಯಾದ ನಂತರ ಅತ್ತೆಯ ಹೆಸರಿನಲ್ಲಿರುವ ಮನೆಯಲ್ಲಿ ವಾಸವಾಗಿದ್ದೆ. ಸದರಿ ಆಸ್ತಿ ನನ್ನ ಅತ್ತೆಗೆ ಅವರ ತಾಯಿಯ ಮನೆಯಿಂದ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಇರುವುದು ಮಾತ್ರ ಗೊತ್ತು ಅವರು ಖರೀದಿ ಮಾಡಿದ್ದಾರೋ ಏನೋ ಎಂದು ಗೊತ್ತಿಲ್ಲ. ನನ್ನ ಮಗ ಅವನ ತಂದೆ ಜೊತೆ ಇರುತ್ತಾನೆ ಎಂದರೆ ನನ್ನ ಮನೆಗೂ ಬಂದು ಹೋಗುತ್ತಾನೆ ಆದರೆ ಬಹಳ ಅವನ ತಂದೆಯೊಂದಿಗೆ ಇರುತ್ತಾನೆ. ನನ್ನ ಮಗನಿಗೆ ಅವನ ಅಜ್ಜಿ ಅಡುಗೆ ಮಾಡಿ ಹಾಕುತ್ತಿದ್ದಳು ಅವನು ಅಲ್ಲಿಂದಲೇ ಕಾಲೇಜಿಗೆ ಹೋಗುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅವನನ್ನು ನನ್ನೊಂದಿಗೆ ಇರಲು ಕರೆದೆ ಆದರೆ ಅವನು ಬರುವುದು ಹೋಗುವುದು ಮಾಡುತ್ತೇನೆ ಎಂದು ಹೇಳಿದ. ನಾನು

ಬಿಟ್ಟು ಹೋದಾಗಿನಿಂದ ನನ್ನ ಮಗ ಅವನ ತಂದೆಯೊಂದಿಗೆ ಇದ್ದಾನೆ ಎಂದರೆ ಸರಿ.

ನನ್ನ ಇಬ್ಬರ  ಮಕ್ಕಳ ಶಾಲಾ ಮತ್ತು ಕಾಲೀಜಿನ ಪೀಸ್ ಅನ್ನು ಎದುರುದಾರನೇ ಕಟ್ಟುತ್ತಿದ್ದಾನೆ ಎಂದರೆ ಸರಿಯಲ್ಲ.  2022 ರವರೆಗೊ ನಾನೇ ಪೀಸ್ ಕಟ್ಟಿದ್ದು 2022 ರ ನಂತರ ನಾನು ಕೆಲಸ ಮಾಡದೇ ಇರುವುದರಿಂದ ಪೀಸ್ ಕಟ್ಟಿರುವುದಿಲ್ಲ.  ಎದುರುದಾರನು ನನ್ನ ಮಕ್ಕಳು ಪೀಸ್ ಕಟ್ಟುತ್ತಿದ್ದಾನೆ ಎಂದರೆ ಸರಿ ಸಾಕ್ಷಿ ಮುಂದುವರೆ ನನ್ನ ಸರ್ಟಿಫಿಕೆಟ್ಸ್ ಎದುರುದಾರನ ಬಳಿ ಇರುವುದರಿಂದ ಅವನು ಕೊಡದೇ ಇರುವುದರಿಂದ ಕೆಲಸಕ್ಕೆ ಹೋಗಲು ಆಗಿರುವುದಿಲ್ಲ.  ನಾನು ನನ್ನ ದಾಖಲೆಗಳನ್ನು ಕೊಡಿ ಎಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ ಮೌಖಿಕವಾಗಿ ನ್ಯಾಯಾಲಯಕ್ಕೆ ಹೇಳಿದ್ದೇನೆ.  2022 ರವರೆಗೆ ನಾನು ಪೀಸ್  ಕಟ್ಟಿದ ಬಗ್ಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

ನನ್ನ ಮದುವೆಯಾದ ನಂತರ ನನ್ನ ಅತ್ತೆ ಮಾವ ತೊಂದರೆ ಕೊಟ್ಟಿದ್ದಾರೆ ಎಂದರೆ ಮನೆಯಲ್ಲಿ ಮಾಮೂಲಿಯಾಗಿ ಏನಾದರೂ ನಡೆಯುತ್ತಿತ್ತು ನಾನು ಅದನ್ನು ಸಹಿಸಿಕೊಂಡು ಇದ್ದೆ.  ನನ್ನ ತಂದೆ ತಾಯಿ ಕನಕಪುರದಲ್ಲಿ ವಾಸವಾಗಿದ್ದಾರೆ.  ನನ್ನ ತಂದೆ ತಾಯಿಗೆ 3 ಜನ ಹೆಣ್ಣು ಮಕ್ಕಳು.  ನನ್ನ ಒಬ್ಬ ಅಕ್ಕ ಕನಕಪುರದಲ್ಲಿ ವಾಸವಾಗಿದ್ದಾರೆ. ನನ್ನ ತಂದೆ ತಾಯಿ ನನ್ನ ಮನೆಗೆ ಬಂದು ಹೋಗುತ್ತಿದ್ದರು.  ಸಾಕ್ಷಿ ಮುಂದುವರೆದು ಅಡ್ಜಸ್ಟ ಮಾಡಿಕೊಂಡು ಇರು ಎಂದು ಹೇಳುತ್ತಿದ್ದರು.  ನನ್ನ ತಂದೆ ತಾಯಿ ಬಂದಾಗ ಒಂದು ವಾರ ನನ್ನ ಗಂಡನ ಮನೆಯಲ್ಲಿ  ಇರುತ್ತಿದ್ದರು ಎಂದರೆ ಸರಿಯಲ್ಲ ಕೆಲವೊಂದು ಬಾರಿ ಒಂದು ದಿನ ಇರುತ್ತಿದ್ದರು ಕೆಲವೊಮ್ಮೆ ಅವರ ಮನೆ ಹತ್ತಿರದಲ್ಲಿರುವುದರಿಂದ ಮಲಗಿಕೊಳ್ಳಲು ಅವರ ಮನೆಗೆ ಹೋಗುತ್ತಿದ್ದರು.

ಮದುವೆಯಾದ ನಂತರ ಕೀರಣಗೆರೆಯಲ್ಲಿ ಚಾಕಿ ಸೆಂಟರ್ ನಲ್ಲಿ ಕೆಲಸ ಮಾಡುತ್ತಿದ್ದರು.  ಈಗಲೂ ಸಹ ಅಲ್ಲೇ ಕೆಲಸ ಮಾಡುತ್ತಿದ್ದಾರೆ ಎಂದರೆ ನಾನು

ಇರುವಾಗ ಅಲ್ಲಿ ಕೆಲಸ ಮಾಡುತ್ತಿದ್ದರು ಈಗ ಗೊತ್ತಿಲ್ಲ. ಎದುರುದಾರ ನನಗೆ ತೀವ್ರವಾಗಿ ಬೆಳಗ್ಗೆ ಮತ್ತು ಸಂಜೆ ಹಿಂಸೆ ಕೊಟ್ಟು ಒಂದು ದಿನ ಕುತ್ತಿಗೆ ಹಿಸುಕಲು ಬಂದು ಮಾಂಗಲ್ಯ ಸರವನ್ನು ಕಿತ್ತು ಹಾಕಲು ಬಂದು ವಿಚ್ಛೇದನ ಕೊಟ್ಟು ಹೋಗು ಎಂದು ಹೇಳಿದ್ದರಿಂದ ಒಂದು ನಾಪತ್ತೆ ಪ್ರಕರಣ ದಾಖಲಾಗಿತ್ತು. ಗಲಾಟೆ ದಿನ ನಡೆಯುತ್ತಿತ್ತು, ಒಂದು ದಿನ ಜಾಸ್ತಿಯಾಗಿ ಆ ರೀತಿ ಪ್ರಕರಣ ದಾಖಲಾಗಿತ್ತು.

ನಾನು ಏನು ಮಾಡಿದರೂ ತಪ್ಪು ಎನ್ನುವ ಕಾರಣಕ್ಕೆ ಜಗಳ ಆಗುತ್ತಿತ್ತು. ನಾನು ಆ ಮೊದಲು ಪೋಲಿಸರಿಗೆ ದೂರು ಕೊಟ್ಟಿರುವುದಿಲ್ಲ. 18 ವರ್ಷ ನಾನು ಎದುರುದಾರನೊಂದಿಗೆ ಇದ್ದಾಗ ಯಾವುದೇ ದೂರು ಕೊಟ್ಟಿರುವುದಿಲ್ಲ ಮತ್ತು ಪಂಚಾಯಿತಿ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಸ್ವಲ್ಪ ದಿನ ನನ್ನ ತಾಯಿ ಮನೆಗೆ ಹೋಗಿ ಅಲ್ಲಿ ಇರುತ್ತಿದ್ದೆ ನಂತರ ನಾನು ನನ್ನ ಗಂಡನ ಮನೆಗೆ ವಾಪಸ್ ಬರುತ್ತಿದ್ದೆ.

ದಿನಾಂಕಃ 13.07.2022 ರಂದು ನಾನು ಬೆಳಗ್ಗೆ 9 ಗಂಟೆಗೆ ಕೆಲಸಕ್ಕೆ ಹೋಗಿ ಇಡೀ ದಿನ ಕೆಲಸ ಮಾಡಿದ್ದೇನೆ. ಅವತ್ತು ನಾನು ಮನೆಗೆ ಬಂದು ಊಟ ಮಾಡಿಕೊಂಡು ಹೋಗಿದ್ದೆ. ವಾಪಸ್ ಬಂದ ನಂತರ ಮನೆಯಲ್ಲಿ ಗಲಾಟೆ ಆಗಿ ದೂರು ದಾಖಲಾಗಿತ್ತು. ಆ ದಿನ ನಾನು ಸಂಜೆ 4 ಗಂಟೆ ಮೇಲೆ ನಾನು ಮನೆಗೆ ಹೋಗಿದ್ದೆ. ನಾನು ಆ ದಿನ ಮನೆಯಿಂದ ಹೊರಗೆ ಹೋದಾಗ ಸಮಯ ಎಷ್ಟಾಗಿತ್ತು ಗೊತ್ತಿಲ್ಲ ಆದರೆ ಕತ್ತಲಾಗಿತ್ತು. ನಾನು ನನ್ನ ತಂದೆ ತಾಯಿ ಮನೆಗೆ ಹೋಗಿದ್ದೆ ಅವರು ಮನೆಯಲ್ಲಿ ಇರಲಿಲ್ಲ ಕೊಯಮತ್ತೂರಿಗೆ ಹೋಗಿದ್ದರು ನಂತರ ನಾನು ಸಿಕ್ಕ ಬಸ್ಸಿಗೆ ಹತ್ತಿಕೊಂಡು ಹೋದೆ.

ನಾನು ಬೆಂಗಳೂರಿಗೆ ಹೋಗಿ ನಾನು ಹೇಳಲು ಇಷ್ಟಪಡದೇ ಇರುವ ನನ್ನ ಸ್ನೇಹಿತೆಯೊಂದಿಗೆ ಹೋಗಿದ್ದೆ. 14.07.2022 ರಂದು ನಾನು ನನ್ನ ಸ್ನೇಹಿತೆಯೊಂದಿಗೆ ಇದ್ದೆ. ಆಕೆ ನನಗೆ ಬುದ್ಧಿ ಹೇಳಿ ದಿನಾಂಕಃ 15.07.2022 ರಂದು ನನಗೆ ಕನಕಪುರಕ್ಕೆ ಹೋಗಲು ಹೇಳಿದ್ದರಿಂದ ಪೋಲಿಸ್ ಠಾಣೆಗೆ ಹೋದೆ. ನನ್ನ ಸ್ನೇಹಿತೆಯ ಸಂಬಂಧಿಕರು ಕನಕಪುರದಲ್ಲಿರುವುದರಿಂದ ಆಕೆಗೆ ದೂರು

ದಾಖಲಾಗಿದ್ದು ಗೊತ್ತಾಗಿದ್ದು ನಂತರ ನನಗೆ ವಿಚಾರ ಗೊತ್ತಾಯಿತು. ಆ ಸಮಯದಲ್ಲಿ ನನ್ನ ಅಕ್ಕ ಕನಕಪುರದಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ಹತ್ತಿರ ದ್ವಿ ಚಕ್ರ ವಾಹನ ಇದೆ. ನಾನು ಹೋಗುವಾಗ ಪೋಲಿಸ್ ಠಾಣೆಯ ಪಕ್ಕ ಹೂವಿನ ಅಂಗಡಿಯ ಪಕ್ಕ ನನ್ನ ಬ್ಯಾಗ್ ಮತ್ತು ಪೋನ್ ಅನ್ನು ಗಾಡಿಯಲ್ಲಿ ಇಟ್ಟು ನಿಲ್ಲಿಸಿ ಹೋಗಿದ್ದೆ.

ನಾನು ಪೋನನ್ನು ಅಲ್ಲಿ ಇಟ್ಟಿದ್ದರಿಂದ ಎಷ್ಟು ಸಾರಿ ಪೋನ್ ಮಾಡಿದರು ನನಗೆ ಗೊತ್ತಾಗಲಿಲ್ಲ ಎಂದರೆ ಸರಿ. ನಾನು ಮನೆಯಲ್ಲಿ ಏನೇನು ನಡೆಯಿತು ಎಂದು ಒಟ್ಟು 13 ಪುಟಗಳ ಪತ್ರವನ್ನು ಬರೆದು ಪೋಲಿಸರಿಗೆ ಕೊಟ್ಟಿದ್ದೆ. ಅದರ ಪ್ರತಿಯನ್ನು ನನಗೆ ಪೋಲಿಸರು ಕೊಡದೇ ಇದ್ದುದ್ದರಿಂದ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ.

ಸಾಕ್ಷಿಗೆ ಒಂದು ಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ತಾನು ಬರೆದ ಪತ್ರ ಎಂದು ಗುರುತಿಸಿದ್ದು ಅದನ್ನು ನಿ.ಆರ್. 1 ಎಂದು ಗುರುತಿಸಲಾಯಿತು. ನಾನು ಈ ಪತ್ರವನ್ನು ಬ್ಯಾಂಕಿನ ನಾನು ಬರೆಯುವ ಲೆಡ್ಜರ್ ನಲ್ಲಿ ಇಟ್ಟು ಹೋಗಿದ್ದೆ. ಇದರ ಅಸಲು ಎಲ್ಲಿದೆ ಗೊತ್ತಿಲ್ಲ. ನಾನು ಸದರಿ ಬ್ಯಾಂಕಿನಲ್ಲಿ ಎಷ್ಟು ಎಫ್.ಡಿ ಮತ್ತು ಸೆಕ್ಯೂರಿಟಿ ಡಿಪಾಸಿಟ್ ಇಟ್ಟಿದ್ದೇನೆಂದು ನನಗೆ ಗೊತ್ತಿಲ್ಲ. ಎಫ್.ಡಿ ಬಾಂಡ್ ನ ಅಸಲು ನನ್ನ ಬಳಿ ಇದೆ ಎಂದರೆ ಸರಿಯಲ್ಲ ಬ್ಯಾಂಕಿನ ಬಳಿ ಇದೆ. ನಾನು ಕೇಳಿದರೆ ಬ್ಯಾಂಕಿನವರು ಸ್ಟೇಟ್ ಮೆಂಟ್ ಕೊಡುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ನಾನು ಪೋಲಿಸರಿಗೆ ನೀಡಿದ ಹೇಳಿಕೆ ಎಂದು ಗುರುತಿಸಿದ್ದು ಅದನ್ನು ನಿ.ಆರ್. 2 ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ದಾಖಲೆಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ನನ್ನ ತಂದೆ ತಾಯಿಯ ಸಹಿಗಳು ಇರುವ ಹೇಳಿಕೆಗಳು ಎಂದು ಗುರುತಿಸಿದ್ದು ಅವುಗಳನ್ನು ನಿ.ಆರ್. 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಹೇಳಿಕೆಗಳಲ್ಲಿ ಸ್ವಲ್ಪ ಬದಲಾಗಿದೆ. ಎದುರುದಾರ, ನನ್ನ ಅಕ್ಕ ಮತ್ತು ನನ್ನ ತಂದೆ ತಾಯಿ ಕರೆ

ಮಾಡಿದಾಗ ನಾನು ಫೋನನ್ನು ಸ್ವೀಕರಿಸಿದೇ ಇರುವುದರಿಂದ ಎದುರುದಾರ ಪೋಲಿಸರಿಗೆ ದೂರು ಕೊಟ್ಟ ಎಂದರೆ ಸರಿ. ನಾನು ಎಲ್ಲಿ ಹೋಗಿದ್ದೆ ಎಂದು ನನ್ನ ಅಕ್ಕ ಮತ್ತು ತಂದೆ ತಾಯಿಗೂ ಗೊತ್ತಿರಲಿಲ್ಲ ಎಂದರೆ ಸರಿ.

ವಾಪಸ್ ಠಾಣೆಗೆ ಬಂದಾಗ ನಡೆದ ಘಟನೆ ಬಗ್ಗೆ ಹೇಳಿದಾಗ ಪೋಲಿಸರು ನನಗೆ ದೂರು ಕೊಡಬೇಕಾಗಿತ್ತು ಆ ರೀತಿ ಹೋಗಬಾರದಿತ್ತು ಬುದ್ದಿ ಹೇಳಿದ ನಂತರ ನಾನು ಒಬ್ಬಂಟಿಯಾಗಿ ಇರುತ್ತೇನೆ ಎಂದು ಹೇಳಿದ್ದರಿಂದ ನಾನು ನನ್ನ ತಂದೆ ತಾಯಿಯೊಂದಿಗೆ ಹೋಗುತ್ತೇನೆ ಎಂದು ಹೇಳಿದೆ. ಆವತ್ತಿನಿಂದ ಇಂದಿನವರೆಗೂ ನನ್ನ ಗಂಡನ ಮನೆಗೆ ಹೋಗಿಲ್ಲ. ನನ್ನ ತಾಯಿ ಪೋಲಿಸರೊಂದಿಗೆ ಹೋಗಿ ಬಟ್ಟೆ ಕೇಳಿದಾಗ ಎದುರುದಾರ ನನ್ನ ಬಟ್ಟೆ ಕೊಟ್ಟಿದ್ದಾನೆ ಸಾಮಾನುಗಳನ್ನು ಕೊಟ್ಟಿರುವುದಿಲ್ಲ. ಆ ಸಮಯದಲ್ಲಿ ಮಕ್ಕಳು ಎದುರುದಾರನೊಂದಿಗೆ ಇದ್ದರು ಎಂದರೆ ಸರಿಯಲ್ಲ. ಮಗಳು ನನ್ನ ಬಳಿ ಇದ್ದು ಮಗ ಹೋಗುವುದು ಬರುವುದು ಮಾಡುತ್ತಿದ್ದ. ನನ್ನ ಮಗಳನ್ನು ನಾನು ಮತ್ತು ಎದುರುದಾರ ಇಬ್ಬರು ಸೇರಿ ನೋಡಿಕೊಳುತ್ತಿದ್ದೇವೆ ಎಂದರೆ ಸರಿ.

ನನ್ನ ತಂದೆ ತಾಯಿ ನನಗೆ ಕನಕಪುರದಲ್ಲಿ ಒಂದು ನಿವೇಶನವನ್ನು ದಾನ ಮಾಡಿದ್ದಾರೆ. ನನಗೆ ಸರ್ಕಾರದಿಂದಲೂ ಒಂದು ನಿವೇಶನ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹಣ ಕಟ್ಟದೇ ಇರುವುದರಿಂದ ಅದು ರದ್ದಾಗುತ್ತದೆ. ಸಾಕ್ಷಿಗೆ ಕೆಲವು ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳ ಪ್ರಕಾರ ಸದರಿ ನಿವೇಶನ ನನ್ನ ಹೆಸರಿಗೆ ನೋಂದಣಿ ಆಗಿದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ನಿ.ಆರ್. 5 ಎಂದು ಗುರುತಿಸಲಾಯಿತು.

ನಾನು ಕೆಲಸ ಮಾಡುತ್ತಿದ್ದ ಸೊಸೈಟಿಯವರು ಪೋಲಿಸ್ ದೂರು ದಾಖಲಾಗಿದ್ದರಿಂದ ಕೆಲಸಕ್ಕೆ ಬರಬೇಡ ಎಂದು ಹೇಳಿದ್ದರಿಂದ ನಾನು ಕೆಲಸವನ್ನು ಬಿಟ್ಟಿದ್ದೇನೆ. ಈ ಬಗ್ಗೆ ನಾನು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ರಾಜೀನಾಮೆ ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಸದರಿ ಸೊಸೈಟಿಯ

ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದುದರಿಂದ ಬ್ಯಾಂಕಿನ ಲಾಕರ್ ಕೀ ನನ್ನ ಬಳಿ ಇರುತ್ತಿತ್ತು ಎಂದರೆ ಸರಿ. ನಾನು ಮನೆ ಬಿಟ್ಟು ಹೋಗುವಾಗ ಬ್ಯಾಂಕಿನ ಲಾಕರ್ ಕೀ ಅನ್ನು ಗಾಡಿಯಲ್ಲೆ ಬಿಟ್ಟು ಹೋಗಿದ್ದೆ ಎಂದರೆ ಸರಿ.

ಎದುರುದಾರನ ಅಣ್ಣ ಪ್ರಕಾಶ್ ಎಂಬುವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಒಬ್ಬ ಅಣ್ಣ ಮತ್ತು ತಮ್ಮ ಇದ್ದಾರೆ. ನಾನು ಎದುರುದಾರನೊಂದಿಗೆ ಬೆಂಗಳೂರಿಗೆ ಹೋದಾಗ ಅವರ ಮನೆಗೆ ಹೋಗಿ ಬರುತ್ತಿದ್ದೆ. 18 ವರ್ಷಗಳ ಕಾಲ ಎದುರುದಾರನೊಂದಿಗೆ ಬಹಳ ಕಾರ್ಯಕ್ರಮಗಳಿಗೆ ಮತ್ತು ಪ್ರವಾಸಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ ಕಾರ್ಯಕ್ರಮಗಳಿಗೆ ಹೋಗಿದ್ದೇನೆ. ಪ್ರವಾಸಕ್ಕೂ ಹೋಗಿದ್ದೇನೆ ಬಹಳ ಹೋಗಿರುವುದಿಲ್ಲ. ನಾನು ಎಲ್ಲರೊಂದಿಗೆ ಖುಷಿಯಾಗಿ ಇರುತ್ತಿದ್ದೆ ಎಂದರೆ ಸರಿ.

ನನಗೆ ರಮೇಶ್ ಎಂಬ ಸ್ನೇಹಿತ ಇದ್ದಾನೆ. ನಾನು ರಾತ್ರಿವರೆಗೆ ಅವನಿಗೆ ಮೆಸೇಜ್ ಮಾಡುತ್ತಿದ್ದೆ ಎಂದರೆ ಗ್ರೂಪ್ ನಲ್ಲಿ ಮಾಡುತ್ತಿದ್ದೆ. ರಾತ್ರಿ 12 ಗಂಟೆ ವರೆಗೆ ನಾನು ಮೆಸೇಜ್ ಮಾಡುತ್ತಿದ್ದೆ ಎಂದರೆ ನನಗೆ ನಿದ್ದೆ ಬರುವವರೆಗೂ ಮೆಸೇಜ್ ಮಾಡುತ್ತಿದ್ದೆ. ಸದರಿ ರಮೇಶ್ ರವರ ಹೆಂಡತಿ ಕವಿತಾ ಎಂಬುವರು ನನ್ನ ಕುಟುಂಬದವರಿಗೆ ಫೋನ್ ಮಾಡಿ ಗಲಾಟೆ ಮಾಡಿದ್ದರು ಎಂದರೆ ಮಿಸ್ ಅಂಡರ್ ಸ್ಟಾಂಡಿಗ್ ಮಾಡಿಕೊಂಡು ಆ ರೀತಿ ಮಾಡಿದ್ದರು. ಆಕೆ ನನಗೆ ಪೋನ್ ಮಾಡಿ ಬೈದಾಗ ನಾನು ಬೈದೆ. ಸಾಕ್ಷಿ ಮುಂದುವರೆದು ಕವಿತಾ ನನಗೆ ಆ ರೀತಿ ಬೈದಾಗ ನಾನು ಪೋಲಿಸ್ ಠಾಣೆಗೆ ದೂರು ಕೊಡಲು ಹೋಗಿದ್ದೆ.

ಎದುರುದಾರ ಮದುವೆಯಾದಾಗಿನಿಂದ ಇಲ್ಲಿಯವರೆಗೆ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದರೆ ಗೊತ್ತಿಲ್ಲ ಅವರು ಏನು ಮಾಡಿದರು ನಷ್ಟವಾಯಿತು ಎಂದು ಹೇಳಿ ಬ್ಯಾಂಕಿನಿಂದ ಸಾಲ ವನ್ನು ಕೊಡಿಸಿದ್ದೇನೆ. ಯಾವಾಗ ಯಾವಾಗ ಸಾಲ ಕೊಡಿಸಿದ್ದೇನೆ ಎಂದು ಮಾಹಿತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಎದುರುದಾರ ಮಾಡುವ ವ್ಯವಹಾರದಲ್ಲಿ ನನ್ನ ತಂದೆಯೂ

ಬಾಗಿಯಾಗಿದ್ದು ಅವರೂ ಸಹ ಹಣ ಕೊಡುತ್ತಿದ್ದರು. ನನ್ನ ತಂದೆ ನಗದು ಮುಖಾಂತರ ಕೊಟ್ಟಿದ್ದು ಆ ಬಗ್ಗೆ ದಾಖಲೆ ನನ್ನ ಬಳಿ ಇರುವುದಿಲ್ಲ. ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಕೇವಲ ಸಹಾಯ ಮಾಡುತ್ತಿದ್ದರು. ಹಣದ ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಹಣವನ್ನು ತೆಗೆದುಕೊಂಡು ಬರಲು ಒಬ್ಬ ಹುಡುಗ ಇದ್ದ ಅವನು ತಂದು ನನಗೆ ಅಥವಾ ಎದುರುದಾರ ಕೈಗೆ ಕೊಡುತ್ತಿದ್ದ.

ದೂರು ದಾಖಲಾದ ನಂತರ ಹೊಂಗಿರಣ ಎಂಬ ಸಂಸ್ಥೆಯವರು ಕೌನ್ಸಿಲಿಂಗ್ ಆಗಿ ನನ್ನನ್ನು ಕರೆದಿದ್ದರು ಎಂದರೆ ಸರಿ. 18 ವರ್ಷ ಜೊತೆಗಿದ್ದುದ್ದರಿಂದ ಮಕ್ಕಳಿಗೋಸ್ಕರ ಜೊತೆಯಲ್ಲಿ ಇರಿ ಎಂದು ಸದರಿ ಸಂಸ್ಥೆಯವರು ಹೇಳಿದರು ಎಂದರೆ ಸರಿ. ಎದುರುದಾರ ಅವನ ಹೆಂಡತಿ ಅವನೊಂದಿಗೆ ಇರಬೇಕೆಂದು ಬೆಂಗಳೂರಿನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಈ ನ್ಯಾಯಾಲಯದಲ್ಲಿಯೂ ಸಹ ಆ ರೀತಿ ಕೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಎದುರುದಾರ ನನ್ನನ್ನು ಕರೆದುಕೊಂಡು ಹೋಗಲು ತಯಾರಿದ್ದಾನೆ ಎಂದರೆ ನನಗೆ ಹೋಗಲು ಇಚ್ಛೆ ಇರುವುದಿಲ್ಲ. ಮಕ್ಕಳನ್ನು ಮತ್ತು ನನ್ನನ್ನು ನೋಡಿಕೊಳ್ಳಲು ಎದುರುದಾರ ತಯಾರಿದ್ದಾನೆ ಎಂದರೆ ನನಗೆ ಇಷ್ಟವಿರುವುದಿಲ್ಲ.

ನನ್ನ ತಂದೆ ತಾಯಿಗೆ ಗಂಡು ಮಕ್ಕಳು ಇಲ್ಲದೇಇರುವುದರಿಂದ ನಾನು ನನ್ನ ತಂದೆ ತಾಯಿಯೊಂದಿಗೆ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ತಂದೆ ತಾಯಿಗೆ ವಯಸ್ಸಾಗಿದೆ ಎಂದರೆ ಸರಿ. ಅವರಿಗೆ ವಯಸ್ಸಾಗಿದೆ ಎಂದು ಅವರಿಗೆ ಸೇವೆ ಮಾಡಬೇಕಾಗುತ್ತದೆ ಮನೆ ಬಿಟ್ಟು ಹೋಗಿದ್ದೇನೆ ಎಂದರೆ ಸರಿಯಲ್ಲ. ನನಗೆ ರಮೇಶ್ ಎಂಬುವನೊಂದಿಗೆ ಸಂಬಂಧ ಇರುವುದರಿಂದ ನಾನು ಮನೆಗೆ ವಾಪಸ್ ಹೋಗಲು ಇಷ್ಟವಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನಿಗೆ ತೊಂದರೆ ಕೊಡಬೇಕೆಂದು ಬೇಕೆಂದು ನಾನು ಕೆಲಸ ಬಿಟ್ಟಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ

ಎಷ್ಟು ಸಂಬಳ ಇತ್ತು ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು 38 ಸಾವಿರದಿಂದ 40 ಸಾವಿರ ಬರುತ್ತಿತ್ತು ಈಗ ನೆನಪಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಎದುರುದಾರರ ಪರ ವಕೀಲರು ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು)

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **4** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**